459

ಕರ್ನಾಟಕ ಸರ್ಕಾರ

ಉಪತಹಶೀಲ್ದಾರರು ನಾಡಕಾರ್ಯಾಲಯ ಚೋರನೂರು ಇವರ ನಡವಳಿಕೆಗಳು

ಉಪಸ್ಥಿತಿ: ಶ್ರೀ ಗುರುರಾಜ್.ಕೆ ದೇಸಾಯಿ, ಉಪತಹಶೀಲ್ದಾರರು

ಅರ್ಜಿದಾರರು: 1) ತಿಪ್ಪೇಸ್ವಾಮಿ ತಂದೆ ಲೇಟ್.ಮಾ.ಹನುಮಂತಪ್ಪ

2) ಸದುವಣ್ಣ ತಂದೆ ಲೇಟ್. ಮಾ.ಹನುಮಂತಪ್ಪ

ವಿರುದ್ಧದಾರರು: ಕಂದಾಯ ನಿರೀಕ್ಷಕರು ಚೋರನೂರು

ವಿಷಯ:- ತೊಣಸಿಗೆರೆ ಗ್ರಾಮದ ಭೂಮಿ ಸ.ನಂ.298/ಬ ಕ್ಷೇತ್ರ 4.80 ಎಕರೆ ಮತ್ತು ಸ.ನಂ.299/ಎ ಕ್ಷೇತ್ರ 3.40 ಎಕರೆ ಪೋತಿ ವಾರಸತ್ವದಂತೆ ವರ್ಗಾವಣೆ ಮಾಡುವ ಕುರಿತು ವಿಚಾರಣೆ ಮಾಡಿದ ಬಗ್ಗೆ.

ಪೀಠಿಕೆ:- ಸಂಬಂಧಿಸಿದ ಅರ್ಜಿದಾರರಿಗೆ ನೋಟೀಸ್ ಜಾರಿಮಾಡಲಾಯಿತು, ಅರ್ಜಿದಾರರು ದಿನಾಂಕ 13.06.2016 ರಂದು ವಿಚಾರಣೆಗೆ ಹಾಜರಾಗಿರುತ್ತಾರೆ. ಸದರಿ ಪ್ರಕರಣವು ಪೋತಿ ವಾರಸತ್ವಕ್ಕಾಗಿ ಜಂಟಿ ಖಾತೆಯಲ್ಲಿಡಲು ಕೋರಿ ಸಲ್ಲಿಸಿದ ಅರ್ಜಿಯಾಗಿದ್ದು, ಅರ್ಜಿದಾರರು ನಮೂನೆ-21 ರಲ್ಲಿ ಸಾಕ್ಷಿಯೊಂದಿಗೆ ಸಹಿ ಮಾಡಿರುತ್ತಾರೆ. ಇದರಿಂದಾಗಿ ನೋಟೀಸ್ ಜಾರಿಯಾಗಿರುತ್ತದೆ ಮತ್ತು ಅರ್ಜಿದಾರರು ವಿಚಾರಣೆ ಸಂದರ್ಭದಲ್ಲಿ ತಿಳಿಸಿದಂತೆ ಅರ್ಜಿದಾರರು ಅನುಪಸ್ಥಿತರಾಗಿದ್ದಾರೆಂದು ಮತ್ತು ನಮ್ಮ ತಾಯಿ ಮೃತಪಟ್ಟು 35 ವರ್ಷಗಳಾಗಿರುತ್ತದೆ, ಮೃತ ತಾಯಿಯ ಯಾವುದೇ ಮರಣಪತ್ರ ನೊಂದಣಿಯಾಗದೇ ಇರುವುದರಿಂದ ಮರಣಪತ್ರ ಪಡೆದಿರುವುದಿಲ್ಲ ಮತ್ತು ಅರ್ಜಿದಾರರ ತಂದೆಯು ದಿನಾಂಕ 19.02.2000 ರಂದು ಮೃತಪಟ್ಟಿರುತ್ತಾರೆ. ಈ ಮೇಲಿನ ಅರ್ಜಿದಾರರ ಕೋರಿಕೆಯಂತೆ ಪೋತಿ ವಾರಸತ್ವ ಖಾತೆಯ ಜಂಟಿಯಾಗಿಡಲು ಮಾನ್ಯವಿರುತ್ತದೆ. ಕಂದಾಯ ನಿರೀಕ್ಷಕರು ಚೋರನೂರು ಇವರ ಷರಾವನ್ನು ತಳ್ಳಿಹಾಕಲಾಯಿತು. ಈ ಹಿನ್ನಲೆಯಲ್ಲಿ ಈ ಕೆಳಗಿನಂತೆ:

ಆರ್ಆರ್‌ಟಿ/ತಕರಾರು/16/16-17 **ಆದೇಶ** ದಿನಾಂಕ:13.06.2016

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳಿಂದಾಗಿ ಅರ್ಜಿದಾರರಿಗೆ ತೊಣಸಿಗೆರೆ ಗ್ರಾಮದ ಭೂಮಿ ಸ.ನಂ.298/ಬ ಕ್ಷೇತ್ರ 4.80 ಎಕರೆ ಹಾಗೂ ಸ.ನಂ.299/ಎ ಕ್ಷೇತ್ರ 3.40 ಎಕರೆ ಪೋತಿ ವಾರಸತ್ವ ಪ್ರಕಾರ ಖಾತೆಯಲ್ಲಿಟ್ಟು ಜಂಟಿಯಾಗಿ ವರ್ಗಾವಣೆ ಮಾಡಲು ದಿನಾಂಕ 13.06.2016 ರಂದು ತೆರೆದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಣೆ ಮಾಡಲಾಯಿತು.

Megha.c
16/7/16

ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಚೋರನೂರು.